

‘ಸಂಸ್ಕಾರ’ ಚಿತ್ರದಲ್ಲಿ ಗಿರೀಶ ಕಾರ್ನಾಡ ಮತ್ತು ಪಿ. ಲಂಕೇಶ್



ಹೊಸ ಅಲೆಯ ಮುನ್ನುಡಿ ಚಿತ್ರಗಳಲ್ಲೊಂದಾದ ‘ನಾಂದಿ’ಯ ಎನ್. ಲಕ್ಷ್ಮೀನಾರಾಯಣ್

೧೮ ಕನ್ನಡ ಸಿನಿಮಾ

ಆಯಾಮ ಆರು

# ಬೆಳ್ಳಿತೊರೆಯಲ್ಲಿ ಬಂಗಾರದ ಅಲೆ

ಕನ್ನಡ ಚಿತ್ರರಂಗದಲ್ಲಿ ‘ಹೊಸ ಅಲೆ’ ಎನ್ನುವ ಪರಿಕಲ್ಪನೆ ಮೊದಲ ಬಾರಿಗೆ ಪ್ರಮುಖವಾಗಿ ಬಳಕೆಯಾದುದು ಎಪ್ಪತ್ತರ ದಶಕದಲ್ಲಿ. 1964ರಲ್ಲಿ ತೆರೆಕಂಡ ಎನ್. ಲಕ್ಷ್ಮೀನಾರಾಯಣ್ ನಿರ್ದೇಶನದ ‘ನಾಂದಿ’ ಚಿತ್ರವನ್ನು ಹೊಸ ಅಲೆಯ ಉದ್ಘಾಟನೆ ಚಿತ್ರವೆಂದು ಗುರ್ತಿಸಲಾಗುತ್ತದೆ. 1970ರಲ್ಲಿ ತೆರೆಕಂಡ ‘ಸಂಸ್ಕಾರ’ ಕನ್ನಡದಲ್ಲಿನ ಹೊಸ ಅಲೆಯನ್ನು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ ಸಿನಿಮಾ. ಯು.ಆರ್. ಅನಂತಮೂರ್ತಿ ಅವರ ‘ಸಂಸ್ಕಾರ’ ಕಾದಂಬರಿಯನ್ನು ಆಧರಿಸಿದ ಈ ಸಿನಿಮಾ ಕನ್ನಡಕ್ಕೆ ಮೊದಲ ಬಾರಿಗೆ ಸ್ವರ್ಣಕಮಲ ತಂದುಕೊಟ್ಟ ಚಿತ್ರವೂ ಹೌದು. ಬಿ.ವಿ. ಕಾರಂತರ ನಿರ್ದೇಶನದ ‘ಚೋಮನದುಡಿ’, ಗಿರೀಶ ಕಾಸರವಳ್ಳಿ ನಿರ್ದೇಶನದ ‘ಘಟಶ್ರಾದ್ಧ’ ಚಿತ್ರಗಳು ಕೂಡ ಸ್ವರ್ಣಕಮಲದ ಗೌರವಕ್ಕೆ ಪಾತ್ರವಾದವು.

1970ರಲ್ಲಿ ತೆರೆಕಂಡ, ಪಟ್ಟಾಭಿರಾಮ ರೆಡ್ಡಿ ನಿರ್ದೇಶನದ ‘ಸಂಸ್ಕಾರ’ ಸಿನಿಮಾದ ಮೂಲಕ ಕನ್ನಡ ಸಿನಿಮಾ ಹೊಸತೊಂದು ತಿರುವಿಗೆ ತನ್ನನ್ನು ಸ್ಪಷ್ಟವಾಗಿ ಒಡ್ಡಿಕೊಂಡಿತ್ತು. ಸ್ವಿಟ್ಜರ್ಲೆಂಡ್‌ನ ಲೊಕಾರ್ನೊ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಮೂರನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದಿದ್ದ ‘ಸಂಸ್ಕಾರ’, ಅತ್ಯುತ್ತಮ ಚಿತ್ರ ರಾಷ್ಟ್ರಪ್ರಶಸ್ತಿ ಮನ್ನಣೆಗೆ ಪಾತ್ರವಾದ ಕನ್ನಡದ ಮೊದಲ ಚಿತ್ರವೂ ಹೌದು. ಕನ್ನಡದಲ್ಲಿ ‘ಹೊಸ ಅಲೆ’ಯ ಚಿತ್ರಗಳ ಉದ್ಘಾಟನಾ ಚಿತ್ರದ ರೂಪದಲ್ಲಿ ಸ್ಪಷ್ಟವಾಗಿ ಗುರ್ತಿಸಬಹುದಾದ ‘ಸಂಸ್ಕಾರ’ದ ಪ್ರಯೋಗಶೀಲತೆಯ ಮುಂದುವರಿಕೆ ರೂಪದಲ್ಲಿ ಗುರ್ತಿಸಬಹುದಾದ ಸಿನಿಮಾ ‘ವಂಶವೃಕ್ಷ’ (1973). ಜಿ.ವಿ. ಅಯ್ಯರ್ ನಿರ್ಮಿಸಿದ ಈ ಸಿನಿಮಾದ ನಿರ್ದೇಶನ ಬಿ.ವಿ. ಕಾರಂತ ಹಾಗೂ ಗಿರೀಶ ಕಾರ್ನಾಡರದು. ನಿರ್ದೇಶನಕ್ಕಾಗಿ ಈ ನಿರ್ದೇಶಕದ್ವಯರಿಗೆ ರಾಷ್ಟ್ರಪ್ರಶಸ್ತಿ ಗೌರವ ದೊರೆಯಿತು. ನಿರ್ದೇಶನ ವಿಭಾಗದಲ್ಲಿ ಕನ್ನಡಿಗರಿಗೆ ರಾಷ್ಟ್ರಪ್ರಶಸ್ತಿ ದೊರೆತದ್ದು ಅದೇ ಮೊದಲು.

‘ವಂಶವೃಕ್ಷ’ ಸಿನಿಮಾ ಅನೇಕ ಪ್ರತಿಭಾವಂತರ ಸಂಗಮ. ಪುಣೆ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಸಂಗೀತ ವಿಭಾಗದ ಪ್ರಾಧ್ಯಾಪಕರಾಗಿದ್ದ ಭಾಸ್ಕರ್ ಚಂದಾವರ್ಕರ್ ‘ವಂಶವೃಕ್ಷ’ದ ಸಂಗೀತ ನಿರ್ದೇಶಕರು. ‘ಸಂಸ್ಕಾರ’ ಬಳಗದಲ್ಲಿದ್ದ ಪ್ರಸಿದ್ಧ ಚಿತ್ರಕಲಾವಿದ ಎಸ್.ಜಿ. ವಾಸುದೇವ್ ಕಲಾ ನಿರ್ದೇಶನ ಈ ಚಿತ್ರಕ್ಕಿತ್ತು. ಎಲ್.ವಿ. ಶಾರದಾ, ವೆಂಕಟರಾವ್ ತಲಗೇರಿ ಪ್ರಮುಖ ಪಾತ್ರಗಳಲ್ಲಿ ಹಾಗೂ ವಿಷ್ಣುವರ್ಧನ್ ಪುಟ್ಟ ಪಾತ್ರದಲ್ಲಿ ನಟಿಸಿದ್ದರು. ಬೆಂಗಳೂರಿನ ‘ಸ್ಟೇಟ್ಸ್’ ಚಿತ್ರಮಂದಿರದಲ್ಲಿ ಇಪ್ಪತ್ತೈದು ವಾರಗಳ ಪ್ರದರ್ಶನ ಕಂಡಿದ್ದು ‘ವಂಶವೃಕ್ಷ’ದ ಹಿರಿಮೆಗಳಲ್ಲೊಂದು.

‘ವಂಶವೃಕ್ಷ’ ಸಿನಿಮಾ ಎಸ್.ಎಲ್. ಭೈರಪ್ಪನವರ, ಅದೇ ಹೆಸರಿನಲ್ಲಿ ಕಾದಂಬರಿಯನ್ನು ಆಧರಿಸಿದ್ದು. ಚಿತ್ರದ ಕಥೆಗಾಗಿ, ಅತ್ಯುತ್ತಮ ಕಥಾಲೇಖಕ ರಾಜ್ಯಪ್ರಶಸ್ತಿ ದೊರೆತಾಗ, ಅದನ್ನು ನಿರಾಕರಿಸಲು ಭೈರಪ್ಪನವರು ನೀಡಿದ್ದ ಕಾರಣ ಕುತೂಹಲಕರವಾಗಿದೆ. “ನಾನು ಸಿನಿಮಾಗಾಗಿ ಕಥೆ ಬರೆಯಲಿಲ್ಲ. ತಮ್ಮ ಕಥೆಯನ್ನು ಸಿನಿಮಾ ಕಥೆಯಂತೆ ಪರಿಗಣಿಸಿರುವುದರಿಂದ ತಮಗೆ ಅವಮಾನವಾಗಿದೆ” ಎನ್ನುವ ಅರ್ಥದಲ್ಲಿ ಅವರು ಮಾತನಾಡಿದ್ದರು.

‘ವಂಶವೃಕ್ಷ’ದ ಜೊತೆಗೆ, ಪೂರ್ಣಚಂದ್ರ ತೇಜಸ್ವಿ ಅವರ ಕಥೆಯನ್ನಾಧರಿಸಿ ಎನ್. ಲಕ್ಷ್ಮೀನಾರಾಯಣ್ ನಿರ್ದೇಶಿಸಿದ ‘ಅಬಚೂರಿನ ಪೋಸ್ಟಾಫೀಸು’ ಹಾಗೂ ‘ಸಂಕಲ್ಪ’ ಚಿತ್ರಗಳನ್ನು 1973ರ ಪ್ರಯೋಗಶೀಲ ಕಲಾತ್ಮಕ ಸಿನಿಮಾಗಳ ಸಾಲಿನಲ್ಲಿ ಗುರ್ತಿಸಬೇಕು. ಅಬಚೂರಿಗೆ ಅತ್ಯುತ್ತಮ ಕನ್ನಡ ಸಿನಿಮಾ ರಾಷ್ಟ್ರಪ್ರಶಸ್ತಿ ದೊರೆತರೆ, ‘ಸಂಕಲ್ಪ’ ಅತ್ಯುತ್ತಮ ಚಿತ್ರ ರಾಜ್ಯಪ್ರಶಸ್ತಿ ಪಡೆಯಿತು. ಪಿ.ವಿ. ನಂಜರಾಜೇ ಅರಸ್ ನಿರ್ದೇಶನದ ‘ಸಂಕಲ್ಪ’, ನಟ ಅನಂತನಾಗ್ ಅವರನ್ನು ಕನ್ನಡ ಚಿತ್ರರಂಗಕ್ಕೆ